ಪ್ರಧಾನ ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ
ಹುಬ್ಬಳ್ಳಿ
ಮೊಕದ್ದಮೆ ಸಂಃ ಸಿ ಸಿ 226/2012

ಸಿಡಬ್ಲ್ಯೂಃ 54
ಪಿಡಬ್ಲ್ಯೂಃ 31

| | |
|---|---|
| ಹೆಸರುಃ ಕುಲಕರ್ಣಿ | ವಯಸ್ಸು ಃ 76 |
| ತಂದೆಯ ಹೆಸರುಃ ಮಲ್ಲೇಶಪ್ಪ ಕುಲಕರ್ಣಿ | ಉದ್ಯೋಗಃ ನಿವೃತ್ತ ಅಧಿಕಾರಿ |
| ವಾಸಸ್ಥಳಃ ಬೆಂಗಳೂರು | |

ದಿಃ 08.11.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ

ನಾನು 2001 ರಿಂದ 2002 ರ ವರೆಗೂ ನಾನು ಮಹಾನಗರ ಪಾಲಿಕೆ ಆಯುಕ್ತನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2001 ರಲ್ಲಿ ನಗರ ಸಭಾ ಸಭೆಯಲ್ಲಿ ಸಭಾ ಸದಸ್ಯರು ತುಂಡು ಗುತ್ತಿಗೆ ಪ್ರಕರಣ ಮಾಡಿ ಹಣವನ್ನು ದುರುಪಯೋಗ ಪಡಸಿರುವ ಬಗ್ಗೆ ಪ್ರಸ್ತಾಪಿಸಿದ್ದು ಅದರಂತೆ ನಾನು ಸಭೆಯಲ್ಲೆ ಹಾಜರಿದ್ದ ನಮ್ಮ ಅಧಿಕಾರಿ ಕೌಷ್ಟಿ ಅವರಿಗೆ ಅದರ ಬಗ್ಗೆ ಸೂಕ್ತವಾಗಿ ತನಿಖೆ ನಡೆಸಿ ವರದಿ ಸಲ್ಲಿರುವಂತೆ ಮೌಖಿಕ ಆದೇಶ ನೀಡಿರುತ್ತೇನೆ. ಮುಂದಿನ ಕ್ರಮ ಜರುಗಿಸಲು ಚಾಸಾ 14 ರವರು ನನ್ನ ಅನುಮತಿ ಕೋರಿದ್ದು ನಾನು ಅದಕ್ಕೆ ಅನುಮತಿಸಿರುತ್ತೇನೆ ಮುಂದಿನ ಕ್ರಮ ಅವರು 6 ಜನರ ವಿರುದ್ಧ ತೆಗೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ** ಆರೋಪಿಗಳ ಪರ ವಕೀಲರಿಂದಃ

ಪೋಲಿಸರು ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಎಂ ಒ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ
ನ್ಯಾಯಾಲಯ,. ಹುಬ್ಬಳ್ಳಿ.